
# ನಾಂದಿಪದ



ಸೆಲ್ಫಿ ಎಂಬುದು ಈ ಕಾಲದ ಶಕ್ತ ರೂಪಕ. ಕೈಯಲ್ಲೇ ಜಗದಗಲ, ಊರಗಲ ಅಳೆಯಲು ಹೊರಟ ಜನರಿಗೆ ಸಿಕ್ಕಿರುವ ಅದ್ಭುತ ಮಾಯಾದೀವಿಗೆ. ಕೊಂಚ ಪ್ರಸಿದ್ಧಿ ಪಡೆದ ವ್ಯಕ್ತಿ ಎದುರಾದರೆ ಇಲ್ಲವೇ ಸ್ಮಾರಕದ ಮುಂದೆ ನಿಂತು ಕೈಯನ್ನು ಮುಂದಕ್ಕೆ ಚಾಚಿದರೆ ಸಾಕು, ಬೆಳಕು ಅವರ ಹಲ್ಲುಕಿರಿಯುವ ಮುಖಗಳನ್ನು ಬೆಳಗುತ್ತದೆ. ಹಾಗೆ ಸೆರೆಯಾದ ಪಂಚರಂಗಿ ಬಿಂಬಗಳು ಇದ್ದಲ್ಲೇ ಚಡಪಡಿಸುತ್ತವೆ. ಅವಕ್ಕೆ ಅಲ್ಲಿಂದ ಹಾರಿಹೋಗುವ ಹಂಬಲ. ಅರೆಚಣದಲ್ಲಿ ಅವು ಫೇಸ್‌ಬುಕ್, ಟ್ವಿಟರ್‌ನಲ್ಲಿ ನೇತಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತವೆ. ಅಲ್ಲಿ ಅದಕ್ಕೇ ಕಾಯುತ್ತಿದ್ದವರ ಮೆಚ್ಚುಗೆಯ ಮುದ್ರೆಗಳೂ ಬೀಳುತ್ತವೆ. ಸ್ವಮೋಹವನ್ನು ಉದ್ದೀಪಿಸುತ್ತ, ನಿಜ ಚಹರೆಗಳನ್ನು ಮಾರೆಮಾಚಿ ಭ್ರಮೆಯ, ನೀರಗುಳ್ಳೆಯಂತಹ ಮುಖಗಳನ್ನು ಜಗತ್ತಿನ ಮುಂದೆ ತೆರೆದಿಡುತ್ತಿದೆ ಈ ಸ್ವಂತೀ. ಅದಕ್ಕೆ ಅದರದೇ ಆದ ವ್ಯಕ್ತಿತ್ವವಿಲ್ಲ. ಸ್ವಂತದ ಗುರುತುಗಳನ್ನು ಇವುಗಳ ಮೂಲಕ ಕಳೆದುಕೊಳ್ಳುವ ಕಾಲವಿದು. ಬೇರೆಯವರ ವ್ಯಕ್ತಿತ್ವದೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುವ ಸೆಲ್ಫಿ ಒಂದು ರೀತಿಯಲ್ಲಿ ಸ್ವಾರ್ಥದ್ದು. ನೋಡುತ್ತಿದ್ದವರ ಮನದಲ್ಲಿ 'ನಾನು ನಿನಗಿಂತ ಉತ್ತಮ' ಎಂಬ ಅನಿಸಿಕೆಯನ್ನು ಹುಟ್ಟುಹಾಕುವಂಥದ್ದು. ಮನುಷ್ಯ ಏಕಾಂಗಿಯಾಗುತ್ತಿರುವುದರ, ತನಗೆ ತಾನೇ ದ್ವೀಪವಾಗುತ್ತಿರುವುದರ, ಹೊರಜಗತ್ತಿನೊಂದಿಗೆ ಜೈವಿಕ ಸಂಬಂಧ ಕಡಿದುಕೊಳ್ಳುತ್ತಿರುವುದರ ಕುರುಹು ಅದಿರಬಹುದು. ಅದು ನನಗೆ ನಾನೇ ಕೇಂದ್ರ ಎಂಬುದನ್ನು, ತನ್ನ ಸುತ್ತಲು ಚೆಂದವಾಗಿ ಕಂಡದ್ದನ್ನು ಮಾತ್ರ ಒಳಗೊಳ್ಳುತ್ತದೆ. ಇಷ್ಟೇ ಆಗಿದ್ದರೆ ಅದರಿಂದ ತೊಂದರೆ ಇರಲಿಲ್ಲ. ಅದು ಕೆಲವರ ವಿಕೃತಿಯನ್ನೂ ಹೇಳದೇ ಕೇಳದೇ ಬೇರೆಯವರ ಮನಸ್ಸಿನ ಗೋಡೆಗಳಿಗೆ ಅಂಟಿಸಿ ಹೋಗುತ್ತದೆ.

ಸೆಲ್ಫಿ ಚಿತ್ರಿಕೆಗಳು ನಮ್ಮ ದೈನಿಕದ ಒಂದು ಅಂಗವಾದಂತಿದೆ. ಹಲವು ಮಾಹಿತಿಗಳ ಮಹಾಪೂರದೊಂದಿಗೆ ಅವೂ ಪ್ರತಿಕ್ಷಣ ಕಣ್ಣಪರದೆಯನ್ನು ಆವರಿಸಿಕೊಳ್ಳುತ್ತಿವೆ. ಅವು ಯಾವುದಕ್ಕೂ ಜೀವವಿಲ್ಲ. ಇತ್ತೀಚೆಗೆ ಬರುತ್ತಿರುವ ಅನೇಕ ಕವಿತೆ, ಕತೆ, ಪ್ರಬಂಧಗಳು ಇದೇ ರೀತಿಯಲ್ಲಿರುತ್ತವೆ. ಜೀವದ ಸ್ಪಂದನೆ ಇಲ್ಲದ, ಆ ಕ್ಷಣದ ಭಾವನೆಗಳ, ಉದ್ರೇಕದ ಸೆಲ್ಫಿ ಆಗಿರುವ ಈ ಬರಹಗಳಿಗೂ 'ಕನಸುಗಳು ಮಾರಾಟಕ್ಕಿವೆ' ಎಂದು ಪದೇಪದೇ ಒರಲುವ ಜಾಹೀರಾತುಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಎಲ್ಲವೂ ಸಪಾಟಾದ, ತೊಳೆದು ತಂತಿಯ ಮೇಲೆ ಹರವಿದ ಭಾವನೆಗಳ ಗುಚ್ಛ. ಹೇಳಿಕೇಳಿ ಇದು ವೈಯಕ್ತಿಕ, ಸಾಮಾಜಿಕ ಎನ್ನುವ ಫರಕು ಇಲ್ಲದೆ ಎಲ್ಲವನ್ನೂ ಪ್ರದರ್ಶನಕ್ಕಿಡುವ ಹೊತ್ತು. ಅಲ್ಲಿ ಕಲೆ, ಅಭಿವ್ಯಕ್ತಿ, ಆಕೃತಿ, ಚೌಕಟ್ಟು, ಸಮಂಜಸತೆ ಏನೂ ಇಲ್ಲ. ಅವೆಲ್ಲ ಇಲ್ಲದಿರುವುದರಿಂದಲೇ ಸೆಲ್ಫಿ ಎಂಬ ಅಲ್ಪಚಿತ್ರಿಕೆ ಬಹುಕಾಲ ಬಾಳುವುದಿಲ್ಲ, ಕಾಡುವುದಿಲ್ಲ. ಆ ಕ್ಷಣದ ಭಾವನೆಗಳ ಕೊಳದಲ್ಲಿ ಅದು ನಮ್ಮನ್ನು ಅದ್ದಬಹುದಷ್ಟೆ.

ಬಸ್ಸಿನಲ್ಲಿ ಬೆಳಗಿನ ತಿಂಡಿ ತಿನ್ನುವ ತಾಯಿ, ರಾತ್ರಿ ಇಡೀ ಹೊರಗೆ ಕೂತು ಎಟಿಎಂ ಕಾಯುವ ಕಾವಲುಗಾರ, ಎರಡೂ ಹೊತ್ತು ಕೈಮೇಲೆತ್ತಿ ಲೋಟಕ್ಕೆ ಚಹ ಸುರಿದು ಕೊಡುವ ತಳ್ಳುಗಾಡಿಯವ, ಬಿಸಿಲಿನಲ್ಲಿ ಬಾಳೆಹಣ್ಣು ಮಾರುವ ಮುದುಕಿ... ಇವರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಯಾರೂ ಮನಸ್ಸು ಮಾಡುವುದಿಲ್ಲ. ಇಂತಹವರ ಭಾವಲೋಕವನ್ನು ಅರಿಯುವ, ತೋರುವ ಕೆಲಸವನ್ನು ಉತ್ತಮ ಬರವಣಿಗೆ ಮಾತ್ರ ಮಾಡುತ್ತದೆ; ಸೆಲ್ಫಿ ಸಾಹಿತ್ಯ ಅಲ್ಲ.

ಈ ಸಂಚಿಕೆಯಲ್ಲಿ 'ಕನ್ನಡ: ಇ–ಹೊತ್ತು'ನಲ್ಲಿ ನುಡಿಯ ಕುರಿತಾದ ಚಿಂತನೆಗಳ ಬರಹಗಳಿವೆ. ಕನ್ನಡದ ಚಿಂತಕರು, ಸಾಹಿತಿಗಳು ಈ ಪುಟ್ಟ ಸಂಕಿರಣದಲ್ಲಿ ತಮ್ಮ ಅನುಭವ, ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಓದುಗರಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

**ಸಂದೀಪ ನಾಯಕ**